ಓ. ಎಸ್. ನಂಃ 169/2016

ಪಿ. ಡಬ್ಲ್ಯೂಃ 1

ದಿಃ 31-07-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ .ಕೆಎಸ್‌ಜೆ ಪ್ರತಿವಾದಿ ಪರ ವಕೀಲರಿಂದ.

ದಾವಾ ಆಸ್ತಿಯಲ್ಲಿ ಪ್ರತಿವಾದಿಯರು ಇಂದಿನವರೆಗೂ ವಾಸವಿದ್ದಾರೆಂದರೆ ಸರಿ. ಪ್ರತಿವಾದಿಯರಿಗೆ ದಾವಾ ಆಸ್ತಿಯನ್ನು ಹೊರತುಪಡಿಸಿ ಬೇರೆ ಮನೆ ಇಲ್ಲ ಎಂದರೆ ಸರಿ. ದಾವಾ ಆಸ್ತಿಯನ್ನು ನಾನೇ ಖರೀದಿ ಹಿಡಿದಿದ್ದೇನೆ ಹಾಗೂ ನನ್ನ ಕಬ್ಜೆಯಲ್ಲಿದೆ ಎಂದು ಬರೆಸಿದ್ದೇನೆ ಎಂದರೆ ಸರಿ. ಸದರಿ ವಿಷಯವನ್ನು ಬಂಕಾಪುರದಲ್ಲಿ ಬರೆಸಿದ್ದೇನೆ. ಖರೀದಿ ಕರಾರು ಪತ್ರವನ್ನು ರಾಮಕೃಷ್ಣ ಎಂಬುವವರು ಬರೆದಿದ್ದಾರೆ ಎಂದರೆ ಸರಿ. ರಾಮಕೃಷ್ಣಪ್ಪನವರ ಮರಣ ಪತ್ರವನ್ನು ಹಾಜರುಪಡಿಸುತ್ತೇನೆ . ರಾಮಕೃಷ್ಣಪ್ಪನವರು ಯಾವಾಗ ಮರಣ ಹೊಂದಿದ್ದರು ಎಂದರೆ ಗೊತ್ತಿಲ್ಲ. ದಾವೆ ಮಾಡಿದ ನಂತರ ರಾಮಕೃಷ್ಣಪ್ಪನವರು ಮರಣ ಹೊಂದಿದ ವಿಚಾರ ತಿಳಿಯಿತು. ಸದರಿಯವರು ಮರಣ ಹೊಂದಿದ ಸಮಯದಲ್ಲಿ ನಾಗಪ್ಪನವರು ಬದುಕಿದ್ದರು. ಪ್ರತಿವಾದಿ ನಂ. 1 ರವರು ಯಾವಾಗ ಮರಣ ಹೊಂದಿದರು ಎಂದರೆ ಒಂದು ವರ್ಷದ ಹಿಂದೆ.

2. ಆಸ್ತಿ ನಂಬರ 180 ರ ಕ್ಷೇತ್ರದ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ದಾವಾ ಆಸ್ತಿಯ ಚಕ್ಕಬಂದಿಯನ್ನು ನಾನು ಮತ್ತು ಪ್ರತಿವಾದಿಯರು ಹೇಳಿ ಬರೆಸಿದ್ದೇವೆ. ಗಿರಣಿ ಕೇಸಿನಲ್ಲಿ ಮತ್ತು ಈ ಕೇಸಿನಲ್ಲಿ ಒಂದೇ ಚಕ್ಕಬಂದಿ ಇದೆ ಎಂದರೆ ಸರ್ವೆ ನಂಬರ ಬೇರೆ ಇದೆ. ನಾನು ಯಾರಿಗೂ ಹಣ ನೀಡಿಲ್ಲ ಹಾಗೂ ಒಂದು ಸುಳ್ಳು ದಾಖಲೆಯನ್ನು ಸೃಷ್ಟಿ ಮಾಡಿಕೊಂಡು ದಾವೆಯನ್ನು ಮಾಡಿದ್ದೇನೆ ಎಂದರೆ ಸರಿಯಲ್ಲ. ರಾಮಕೃಷ್ಣನವರು ಇನ್ನೂ ಜೀವಂತವಾಗಿದ್ದಾರೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು  ಮಾಡಲಾಯಿತು.)

ಓ ಹೆ ಕೆ  ಸರಿ ಅದೆ.

ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಶಿಗ್ಗಾಂವ.